
# ಪ್ಲೇಗು



ಬೆಳಗ್ಗೆದ್ದು  ಮನೆಯಿಂದ ಅವನು ಹೊರಗೆ ಬಿದ್ದಾಗ ತಣ್ಣನೆಯ ಗಾಳಿ ಬೀಸುತ್ತಿತ್ತು. ಇನ್ನೂ ಸೂರ್ಯ ಮೂಡದೇ ಇದ್ದುದರಿಂದ ಚುಮುಚುಮು ಬೆಳಕು. ರಸ್ತೆಯಲ್ಲಿ ಒಂದೋ ಎರಡೋ ವಾಹನಗಳು. ನಿರ್ಜನ ವಾತಾವರಣ. ದಿನಾ ಅಷ್ಟು ಹೊತ್ತಿಗೆ ವಾಕಿಂಗ್ ಹೋಗುವ ಕೆಲವು ಜನರು ಎದುರಾಗುತ್ತಿದ್ದರೂ ಅಂದು ಒಬ್ಬರೂ ಕಾಣಲಿಲ್ಲ. ತಾನೇನಾದರೂ ಬಹಳ ಬೇಗ ಎದ್ದು ಹೊರಟೆನೇ ಎಂದು ಅನುಮಾನವಾಗಿ ಅವನು ವಾಚು ನೋಡಿದ. ಸರಿಯಾಗಿ ಕಾಣಿಸದೇ ಇದ್ದಾಗ ಬೀದಿ ದೀಪದ ಬಳಿಗೆ ಹೋಗಿ ಅದರ ಬೆಳಕಿಗೆ ಹಿಡಿದ. ಐದೂವರೆ. ಅದೇನಾದರೂ ನಿಂತು ಹೋಗಿದೆಯೇ ಎಂದು ಕಣ್ಣರೆಪ್ಪೆ ಮಿಟುಕಿಸದೆ ದಿಟ್ಟಿಸಿ ನೋಡಿದ. ಇಲ್ಲ, ಅದರ ಸೆಕೆಂಡಿನ ಮುಳ್ಳು ಸಲೀಸಾಗಿ ಓಡುತ್ತಿದ್ದುದು ಸ್ಪಷ್ಟವಾಗಿ ಕಂಡಿತು. ಆದರೂ ಯಾಕೆ ಇನ್ನೂ ಯಾರೂ ಹೊರಗೆ ಬಂದಿಲ್ಲ ಎಂದು ಯೋಚಿಸುತ್ತಾ ಮುಂದೆ ಹೆಜ್ಜೆ ಹಾಕಿದ.

ಅವನು ನಾಲ್ಕು ಹೆಜ್ಜೆ ಹಾಕಿದನೋ ಇಲ್ಲವೋ, ಹಾಲಿನ ಲಾರಿಯೊಂದು ಜೋರಾಗಿ ಸದ್ದು ಮಾಡುತ್ತಾ, ಅಷ್ಟೇ ಹೊಗೆಯನ್ನು ಉಗುಳುತ್ತಾ ಎದುರುಗಡೆಯಿಂದ ಬಂದು ಹಾದು ಹೋಯಿತು. ಹೋದ ಮೇಲೆಯೂ ಹೊಗೆಯ ವಾಸನೆ ಅವನ ಸುತ್ತ ತುಂಬಿ ಆ ಮಬ್ಬಿನಲ್ಲೂ ತನ್ನ ಕಪ್ಪನೆಯ ಇರವನ್ನು ಸೂಚಿಸಿತು. ಬೆಳಗಿನ ಹೊತ್ತು ವಾತಾವರಣ ತಿಳಿಯಾಗಿರುತ್ತದೆ, ವಾಕಿಂಗ್‌ಗೆ ಅನುಕೂಲ ಎಂದುಕೊಂಡವನಿಗೆ ಈ ಕಲುಷಿತತೆ ಕಿರಿಕಿರಿ